ಮೂಗಿಗೆ ಅಂಟಿರುತ್ತಿತ್ತು, ಪಂಚ ಕಜ್ಜಾಯ ತಿನ್ನುವಾಗ ಮೂಗಿಗೆ ಅಂಟಿಕೊಳ್ಳುತ್ತಿತ್ತು, ಮೂಗಿನ ಒದ್ದೆಯನ್ನು ಆಗಾಗ ಒರೆಸಿಕೊಳ್ಳಲು ಟಿಷ್ಯೂ ಪೇಪರ್‌ಗಳು ಸಿದ್ಧವಾಗುತ್ತಿದ್ದವು. ವೈದ್ಯರು ನಾಡಿ ಬಡಿತ ನೋಡುವ ಬದಲು ಮೂಗಿನ ಒದ್ದೆಯನ್ನು ನೋಡುತ್ತಿದ್ದರು, ಸ್ವ್ಯಾಬ್ ಟೆಸ್ಟ್ ಮಾಡಲು ಮೂಗಿನ ಹೊಳ್ಳೆಯೊಳಗೆ ಕಡ್ಡಿ ಆಡಿಸಬೇಕಾಗಿರಲಿಲ್ಲ, ಕವಿಗಳು ಮೂಗನ್ನು ಇಬ್ಬನಿ ಬಿದ್ದ ಸಂಪಿಗೆಗೆ ಹೋಲಿಸುತ್ತಿದ್ದರು...

ಇದೊಂದು ದಿಕ್ಸೂಚಿ ಅಂಗವಾದರೂ, ಎಲ್ಲಲ್ಲಿಗೂ ನಮಗಿಂತ ಮೊದಲು ಹೋಗುವುದು ಇದುವೇ. ಹಾಗಾಗಿ ಮೂಗಿಲ್ಲದವರನ್ನು ದಿಕ್ಕಿಲ್ಲದವರು ಎಂದು ಪರಿಗಣಿಸಿ ಕರುಣೆ ತೋರಿಸಬಹುದು. ಇನ್ನು, ಯಾವ ವಾಸನೆಯೂ ಇಲ್ಲದ ದೇವಲೋಕದಲ್ಲಿ ಈ ಮೂಗಿಗೇನು ಕೆಲಸ ಎಂದು ಕೇಳಿದರೆ, ಪ್ರಮಾಣಬದ್ಧವಾದ ದೇಹವನ್ನು ಸಿಮೆಟ್ರಿಕಲ್ ಆಗಿ ನಿರ್ಮಿಸಲು ಸುಲಭವಾಗುವಂತೆ ನಡುವೆ ಮೂಗು ಇಟ್ಟಿರಬಹುದು ಎಂದು ಊಹಿಸಬಹುದು. ಮೂಗೇ ಓರೆಯಾಗಿದ್ದರೆ? ಆಗ ಸಿಮೆಟ್ರಿ ತಪ್ಪಿ ದೇಹವೂ ಓರೆಯಾಗಬಹುದು. ಹೀಗೆ ಕೊರತೆಯ ಮೂಗಿರುವವರನ್ನೇ ಅಲ್ಲವೇ ಬಸವಣ್ಣನವರು ಮೂಕೊರತಿ, ಮೂಕೊರೆಯ ಎಂದು ಸ್ತ್ರೀಲಿಂಗಕ್ಕೆ ಬೇರೆ ಪುಲ್ಲಿಂಗಕ್ಕೆ ಬೇರೆ ಹೆಸರಿರಿಸಿ ಕರೆದಿರುವುದು. 'ಹುಬ್ಬಿನ ಗೆರೆ ಡೊಂಕು ಕಣ್ಣ ನೋಟವು ಡೊಂಕೇ' ಎಂದು ಅಂಬಿಕಾತನಯರು ರಸಿಕನಲ್ಲಿ ಕೇಳಿದಂತೆ, ಮೂಗಿನ ತುದಿ ಡೊಂಕು ಗ್ರಹಿಸುವ ವಾಸನೆ ಡೊಂಕೇ? ಎಂದು ಮೂಗಿರುವ ಮೂಸಿಕರಲ್ಲಿ ಹುಬ್ಬೇರಿಸಿ ಕೇಳಬಹುದು.

ಈಗ ಎಲ್ಲರೂ ಅವರವರ
ಮೂಗಿನ ನೇರಕ್ಕೆ ಮಾತಾಡುವವರೇ
ಏಕೆಂದರೆ ಮೂಗಿನ ಸರೀ ಕೆಳಗೆಯೇ
ಬಾಯಿಯಿರುವುದರಿಂದ.

ಮೀಸೆ ಪುರುಷತ್ವದ ಸಂಕೇತವಂತೆ, ಹಾಗಾದರೆ ಮೂಗು? ನನ್ನ ಪ್ರಕಾರ ಇದು ಸಹಿಷ್ಣುತೆಯ ಸಂಕೇತ. ಅಲ್ಲಿ ಇಲ್ಲಿ ಎಷ್ಟೇ ನಾತಪಂಥದವರು ಇದ್ದರೂ ಅವರೊಡನೆ ಒಂದಾಗಿ ಸಾಗುವುದಿಲ್ಲವೇ? ಅಪಾನ ಎಂದರೂ ಪಾನ ಮಾಡುವುದಿಲ್ಲವೇ? ಗಬ್ಬು ಗಾರ್ಬೇಜುಗಳನ್ನು ಸಹಿಸಿಕೊಂಡು ಗಾಳಿಯನ್ನು ಪ್ರಾಣವಾಯುವಾಗಿ ಪರಿವರ್ತಿಸಿಕೊಡುವುದಿಲ್ಲವೇ? ಸಹನೆ ಎಂದರೆ ಇದೇ ಅಲ್ಲವೇ? ಈ ಪ್ರಪಂಚದಲ್ಲಿ ಮೂಗು ಹುಟ್ಟಿದ ಅನಂತರವೇ ವಾಸನೆ ಹುಟ್ಟಿತು ಎನ್ನುವವಳು ನಾನು. ಹಾಗಾಗಿ ಇಲ್ಲಿಯ ಈ ವಾಸನೆಗಳ ಬಗ್ಗೆ ನನ್ನ ತಕರಾರುಗಳು ಏನಿಲ್ಲ.

ಮುಸಿ ಮುಸಿ ನಗು... ಗೊರ ಗೊರ ಗೊರಕೆ... ಸಿಡಿಸಿಡಿ ಸೀನು.. ಎಲ್ಲವೂ ನಿನ್ನಿಂದಲೇ. ಸೋ ನೋಸ್‌ನಿಂದ ನಾಯ್ಸ್ ಹುಟ್ಟಿತು ಎನ್ನುವವಳು ನಾನು. ವರ್ಣಮಾಲೆಯಲ್ಲಿ ಅನುನಾಸಿಕಗಳು ಹುಟ್ಟುವುದೂ ಈ ನೋಸ್‌ನಿಂದಲೇ. ಮೂಗು ಮುಚ್ಚಿ 'ಙಞಣನಮಂ' ಎಂಬ ಮಂತ್ರವನ್ನು ಉಚ್ಚರಿಸಿ ನೋಡೋಣ. ಮೂಗು ಕಳೆದುಕೊಂಡ ಶೂರ್ಪನಖಿ ತನ್ನಣ್ಣ ರಾವಣನನ್ನು ಅಡ್ಡ ಅಡ್ಡ ಎಂದು ಕರೆದಿರಬಹುದೇ? ಆದರೂ ಶೂರ್ಪನಖಿ ಪಂಚವಟಿಗೆ ಹೋಗುವ ಮೊದಲು ಯಾರಾದರೂ ಜೋಯಿಸರಲ್ಲಿ ಒಮ್ಮೆ ಪ್ರಶ್ನೆ ಇರಿಸಿ ಕೇಳಿದ್ದರೆ ಒಳ್ಳೆಯದಿತ್ತು. ಅವರು ನಿನಗೆ ಕೆಡುಕಾಗುವುದು ನಿನ್ನ ಶಾರ್ಪ್ ನಖದಿಂದಲ್ಲ ಶಾರ್ಪ್ ಮೂಗಿನಿಂದ, ಎಚ್ಚರವಿರಲಿ ಎಂದಿರುತ್ತಿದ್ದರು. ಪರಿಹಾರಾರ್ಥವಾಗಿ ನಾಸಾಗ್ರಧ್ಯಾನ ಮಾಡು ಎಂದೂ ಹೇಳಿರುತ್ತಿದ್ದರು. ಮನುಷ್ಯರ ವಾಸನೆ ಹಿಡಿದು ತಾನೇ ಅವಳು ಅತ್ತ ಹೋದದ್ದು? ಮೂಗು ಗ್ರಹಿಸಿದ ವಾಸನೆಗೂ ಕಣ್ಣು ಕಂಡ ನೋಟಕ್ಕೂ ತಾಳೆಯಾಗದೆ ಅಲ್ಲಿ